


**ರಾಮಮನೋಹರ ಲೋಹಿಯಾ ಜೀವನಯಾನ**

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ಕಾಗೋಡಿನಲ್ಲಿ ಲೋಹಿಯಾ; ಕಡಲಿನಾಚೆಗೆ ಲೋಹಿಯಾ

ಲೋಹಿಯಾ 1951ರ ಜೂನ್ 12ರಂದು ಬೆಂಗಳೂರಿಗೆ ವಿಮಾನದಲ್ಲಿ ಬಂದರು; ರಾತ್ರಿ ರೈಲಿನಲ್ಲಿ ಸಾಗರದತ್ತ ಹೊರಟರು. ಅಷ್ಟು ಹೊತ್ತಿಗಾಗಲೇ ಕನ್ನಡನಾಡಿನ ಶಾಂತವೇರಿ ಗೋಪಾಲಗೌಡರು ಅವರನ್ನು ತಮ್ಮ ಸಮಾಜವಾದಿ ಗುರುವಾಗಿ ಸ್ವೀಕರಿಸಿದ್ದರು.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಆರಗ ಗ್ರಾಮದ ಗೋಪಾಲಗೌಡ ಲೋಹಿಯಾರಂತೆ ಬಾಲ್ಯದಲ್ಲಿ ಕೊಳಲು ನುಡಿಸುತ್ತಿದ್ದ. ಹುಡುಗ ಗೋಪಾಲ ತನಗರಿವಿಲ್ಲದೆಯೇ ಗುರುವಿನ ಹಾದಿ ಹಿಡಿದಿದ್ದ ಬಗೆ ಕುತೂಹಲಕರವಾಗಿದೆ:

8 ಆಗಸ್ಟ್ 1942ರ ಗಾಂಧೀಜಿಯ 'ಕ್ವಿಟ್ ಇಂಡಿಯಾ' ಕರೆ ಕೇಳಿ ಮೈಸೂರು ರಾಜ್ಯದ ಸಾವಿರಾರು ಮಹಿಳೆಯರು, ಮಹನೀಯರು ಸ್ವಾತಂತ್ರ್ಯ ಚಳುವಳಿಗಿಳಿದರು; ತೀರ್ಥಹಳ್ಳಿಯಲ್ಲೂ 'ಕ್ವಿಟ್ ಇಂಡಿಯಾ' ಚಳುವಳಿಯ ಮೆರವಣಿಗೆ ಹೊರಟಿತು. ಮೆರವಣಿಗೆ ತೀರ್ಥಹಳ್ಳಿಯ ಹೈಸ್ಕೂಲಿನವರೆಗೂ ಬಂತು.

ಆ ಹೈಸ್ಕೂಲಿನಲ್ಲಿ ಗೋಪಾಲಗೌಡ ಎಸ್.ಎಸ್.ಎಲ್.ಸಿ. ಸಿದ್ಧತಾ ಪರೀಕ್ಷೆ ಬರೆಯುತ್ತಿದ್ದ.

